# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 262
2. ಸದಸ್ಯರ ಹೆಸರು : ಶ್ರೀ ಹೆಚ್ ಎಸ್ ಗೋಪಿನಾಥ್
3. ಉತ್ತರಿಸಬೇಕಾದ ದಿನಾಂಕ : 29.01.2026
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೆಸಿ ವ್ಯಾಲಿ ನೀರಿನಿಂದ ಭೂಗರ್ಭ ಜಲ ಮಾಲಿನ್ಯವಾಗದಂತೆ ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ: | ಸಣ್ಣ ನೀರಾವರಿ ಇಲಾಖೆಯಿಂದ ತ್ಯಾಜ್ಯ ನೀರನ್ನು ಸಂಸ್ಕರಿಸಲಾಗುವುದಿಲ್ಲ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಯಎಸ್‌ಎಸ್‌ಬಿ) ರವರು ದ್ವಿತೀಯ ಹಂತದಲ್ಲಿ ಸಂಸ್ಕರಿಸಿ ನೀಡುವ ನೀರನ್ನು ಮಾತ್ರ ಈ ಇಲಾಖೆಯಿಂದ ಪಂಪ್ ಮಾಡಲಾಗುತ್ತಿದೆ.<br><br>ಸದರಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು ತ್ಯಾಜ್ಯ ನೀರನ್ನು ಸಕ್ರಿಯ ಕೆಸರು ಪ್ರಕ್ರಿಯೆ (Activated Sludge Process) ಯಿಂದ ಗೃಹ ಬಳಕೆಯ ತ್ಯಾಜ್ಯ ನೀರನ್ನು ಮಾತ್ರ ಶುದ್ಧೀಕರಿಸಲು ನಿರ್ಮಿಸಲಾಗಿರುತ್ತದೆ. ಸದರಿ ಪ್ರಕ್ರಿಯೆಯಲ್ಲಿ ಗಾಳಿ ಹಾಗೂ ಅಣು ಜೀವಿಗಳ ಸಹಾಯದಿಂದ ತ್ಯಾಜ್ಯ ನೀರು ಶುದ್ಧೀಕರಣ ನಡೆಯುತ್ತಿರುತ್ತದೆ. ಬೆಂಗಳೂರು ಜಲಮಂಡಳಿಯು ರಾಸಾಯನಿಕ ಮಿಶ್ರಿತ ತ್ಯಾಜ್ಯ ನೀರು ಸದರಿ ಘಟಕಗಳಿಗೆ ಸೇರದಂತೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿರುತ್ತದೆ. ಮುಂದುವರೆದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಸಾಯನಿಕ ಮಿಶ್ರಿತ ತ್ಯಾಜ್ಯ ನೀರನ್ನು ಮಂಡಳಿಯ ತ್ಯಾಜ್ಯ ನೀರಿನ ಕೊಳವೆ ಮಾರ್ಗಗಳಿಗೆ ಹಾಗೂ ಇಳಿಗುಂಡಿಗಳಿಗೆ ಸೇರದಂತೆ ಕಾರ್ಖಾನೆಗಳ ಮತ್ತು ಇತರರ ಮೇಲೆ ಕ್ರಮ ಕೈಗೊಳ್ಳುವ ಹಾಗೂ ರಾಸಾಯನಿಕ ತ್ಯಾಜ್ಯ ಸಂಸ್ಕರಣ ಘಟಕಗಳ ನಿರ್ಮಾಣದ ಜವಾಬ್ದಾರಿಯನ್ನು ಹೊಂದಿರುತ್ತದೆ.<br><br>ಈ ಹಿನ್ನೆಲೆಯಲ್ಲಿ, ಬೆಂಗಳೂರು ಜಲಮಂಡಳಿಯು ಗೃಹಬಳಕೆಯ ತ್ಯಾಜ್ಯ ನೀರನ್ನು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು ನಿಗದಿಪಡಿಸಿರುವ ಮಾನದಂಡಗಳ ಮಿತಿಯೊಳಗೆ ಕೋರಮಂಗಲ ಹಾಗೂ ಚಲ್ಲಘಟ್ಟ ಕಣಿವೆಯಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಲ್ಲಿ ತ್ಯಾಜ್ಯ ನೀರನ್ನು ಸಂಸ್ಕರಣೆಯನ್ನು ಮಾಡಲಾಗುತ್ತಿರುತ್ತದೆ.<br><br>ಭಾರತೀಯ ವಿಜ್ಞಾನ ಸಂಸ್ಥೆರವರ ನೇತೃತ್ವದಲ್ಲಿ ತಜ್ಞರ ಸಮಿತಿಯನ್ನು ರಚಿಸಿ ಕೆ.ಸಿ ವ್ಯಾಲಿ ಯೋಜನೆಯನ್ನು ಕಳೆದ 5 ವರ್ಷಗಳಿಂದ ಅಧ್ಯಯನ ನಡೆಸಿ ನಿಗಾವಹಿಸಿರುತ್ತಾರೆ. ಕೆ.ಸಿ.ವ್ಯಾಲಿ ಯೋಜನೆಯ ಸಂಸ್ಕರಿಸಿದ ತ್ಯಾಜ್ಯ ನೀರು ಅಂತರ್ಜಲ ವೃದ್ಧಿಗೆ ಯೋಗ್ಯವಾಗಿದ್ದು ಈ ಕೆಳಕಂಡ |

| | | |
|---|---|---|
| | | ಸಕಾರಾತ್ಮಕ ಪರಿಣಾಮಗಳ ಕುರಿತು ಅಧ್ಯಯನದ ವರದಿಯಲ್ಲಿ ದೃಢಪಟ್ಟಿದೆ.<br><br>• ಸುಧಾರಿತ ಅಂತರ್ಜಲ ಮಟ್ಟ ಮತ್ತು ಅಂತರ್ಜಲ ಗುಣಮಟ್ಟ.<br><br>• ನೀರಿನ ಹೆಚ್ಚಿನ ಲಭ್ಯತೆಯಿಂದಾಗಿ ಕೃಷಿ ಉತ್ಪನ್ನಗಳಲ್ಲಿ ಗಣನೀಯ ಹೆಚ್ಚುವರಿ.<br><br>• ಹಾಲು ಮತ್ತು ಮೀನಿನ ಉತ್ಪಾದನೆಯಲ್ಲಿ ಗಣನೀಯ ಹೆಚ್ಚುವರಿ.<br><br>• ರೈತರ ಆದಾಯದಲ್ಲಿ ಗಣನೀಯ ಹೆಚ್ಚಳಿಕೆ.<br><br>• ಗ್ರಾಮೀಣ ಆರ್ಥಿಕತೆಯಲ್ಲಿ ಪುನಶ್ಚೇತರಿಕೆ.<br><br>• ವಲಸೆ ಹಕ್ಕಿಗಳ ಪುನರಾಗಮನ ಮತ್ತು ಹೆಚ್ಚಿದ ಪ್ರವಾಸೋದ್ಯಮ.<br><br>ಕೆರೆಗಳ ಪರಿವಿದಿಯಲ್ಲಿ ಅಧ್ಯಯನ ಕೊಳವೆ ಬಾವಿಗಳ ಮುಖಾಂತರ ನೀರಿನ Sample ಗಳನ್ನು ಪರೀಕ್ಷಿಸಿ ಅಂತರ್ಜಲದ ನೀರಿನ ಗುಣಮಟ್ಟವು ಉತ್ತಮವಾಗಿರುವುದನ್ನು ಸಹ ಧೃಢಪಡಿಸಿಕೊಳಲು ಕ್ರಮ ವಹಿಸಲಾಗುತ್ತಿದೆ.<br><br>ಸದರಿ ಯೋಜನೆಯಿಂದ ತುಂಬಿಸುತ್ತಿರುವ ನೀರಿನ ಗುಣ ಮಟ್ಟವನ್ನು ಪೂರ್ವಭಾವಿಯಾಗಿ ಪರಿಶೀಲಿಸಲಾಗುತ್ತಿದ್ದು, ನೀರಿನ ಗುಣ ಮಟ್ಟವು ಸಿ.ಪಿ.ಸಿ.ಬಿ. ಮತ್ತು ಎನ್.ಜಿ.ಟಿ. ಮಾನ ದಂಡಗಳಿಗೆ ಅನುಗುಣವಾಗಿ ಇರುತ್ತದೆ. ನೀರಿನ BOD (Biochemical Oxygen Demand) ಮತ್ತು DO (Dissolved Oxygen) ಪ್ರಮಾಣಗಳನ್ನು ದೈನಂದಿನವಾಗಿ ಪರಿಶೀಲಿಸಲಾಗುತ್ತಿದ್ದು, ಅವುಗಳು ನಿಗಧಿತ ಮಾನದಂಡಗಳನ್ನು ಪೂರೈಸುತ್ತಿರುತ್ತವೆ.<br><br>ಸದರಿ ಸಂಸ್ಕರಿಸಿದ ನೀರನ್ನು ನೇರವಾಗಿ ಕುಡಿಯುವುದಕ್ಕಾಗಲೀ ಅಥವಾ ಕೃಷಿ ಚಟುವಟಿಕೆಗಳಿಗೆ ನೀಡಲಾಗುತ್ತಿಲ್ಲ ಎಂಬ ಮಾಹಿತಿಯನ್ನು ಪ್ರತಿ ಕೆರೆಯ ಮುಂದೆ ಸೂಚನಾ ಫಲಕದಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿರುತ್ತದೆ. |
| ಆ | ಕೆಸಿ ವ್ಯಾಲಿ ಯೋಜನೆಯಲ್ಲಿ ಬರುವ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಯಾವ ಕೆರೆಗಳನ್ನು ಸೇರಿಸಲಾಗಿದೆ: (ಸಂಪೂರ್ಣ ವಿವರ ನೀಡುವುದು) | ಕೆಸಿ ವ್ಯಾಲಿ ಯೋಜನೆಯಲ್ಲಿ ಬರುವ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಕೆರೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿರುತ್ತದೆ. |

| | | |
|---|---|---|
| ಇ | ಉಳಿಯಂಗ್ಲಾ, ಗವಿಕೆರೆ, ಯಾರಂಜನಹಳ್ಳಿ/ ತಿರುಪಾಳ್ಯ ಕೆರೆಗಳಿಗೆ ಕೆ.ಸಿ ವ್ಯಾಲಿ ಯೋಜನೆ ಅಡಿ ಅನುದಾನ ಮಂಜೂರಾಗಿದೆಯೇ, ಆಗಿದ್ದಲ್ಲಿ ಅನುದಾನದ ಮೊತ್ತ ಎಷ್ಟು; | ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿಯ ಗ್ರಾಮಗಳ ಸುತ್ತಮುತ್ತಲಿನ ಕೆರೆಗಳಿಗೆ ಕೆಸಿ ವ್ಯಾಲಿ ಯೋಜನೆ ಮುಖಾಂತರ 69 ಕೆರೆಗಳಿಗೆ ತುಂಬಿಸುವ ಯೋಜನೆಯು ಈಗಾಗಲೇ ಪ್ರಗತಿಯಲ್ಲಿದ್ದು, ಸದರಿ ಯೋಜನೆಯಡಿಯಲ್ಲಿ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಕೆಲವು ಗ್ರಾಮದ ಕೆರೆಗಳಾದ ವಾಬಸಂದ್ರ ಕೆರೆ, ತಿರುಪಾಳ್ಯ, ಗವಿ ಕೆರೆ ಮತ್ತು ಯಾರಂಡಹಳ್ಳಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಪ್ರಸ್ತಾವನೆ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿದೆ. |
| ಈ | ಈ ಕೆರೆಗಳಿಗೆ ಅನುದಾನ ಮಂಜೂರಾದ ಸರ್ಕಾರ ಯಾವ ಆದೇಶ (40) ಸಂಖ್ಯೆ ಮತ್ತು ದಿನಾಂಕದಿಂದ ಮಂಜೂರು ಮಾಡಲಾಗಿದೆ: | |
| ಉ | ಈ ಕೆರೆಗಳಿಗೆ ಸಂಬಂಧಿಸಿದಂತೆ ನೀರಿನ ಕಾಲುವೆ ಕೆರೆ, ಪುನಶ್ಚೇತನ ಪಡಿಸುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆಯೇ: (ವಿವರ ನೀಡುವುದು) | |

ಕಡತ ಸಂಖ್ಯೆ: MID/6/LCQ/2026

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು.

ಅನುಬಂಧ-1

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 230(262) ಕ್ಕೆ ಅನುಬಂಧ

ಕೆಸಿ ವ್ಯಾಲಿ ಯೋಜನೆಯಲ್ಲಿ ಬರುವ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಕೆರೆಗಳ ವಿವರ

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಹೋಬಳಿ | ಕೆರೆಯ ಹೆಸರು | ಇಲಾಖೆ | ತುಂಬಿಸಲಾಗುತ್ತಿರುವ ನೀರಿನ ಪ್ರಮಾಣ (ಎಂ.ಸಿ.ಎಫ್.ಟಿ. ಗಳಲ್ಲಿ) |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಮಂಟಪ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 7.32 |
| 2 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಬಿದರ ಅಮಾನಿ ಕೆರೆ | ಸಣ್ಣ ನೀರಾವರಿ ಇಲಾಖೆಯ ಕೆರೆ | 30.12 |
| 3 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಹುಲ್ಲಹಳ್ಳಿ ಚಿಕ್ಕಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 2.10 |
| 4 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಹುಲ್ಲಹಳ್ಳಿ ದೊಡ್ಡಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 3.68 |
| 5 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ವಡೇರಮಂಚನಹಳ್ಳಿ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 3.67 |
| 6 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಕೋನಸಂದ್ರ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 1.57 |
| 7 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ದ್ಯಾವಸಂದ್ರ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 2.36 |
| 8 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಆದೂರು ಚಿಕ್ಕ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 13.69 |
| 9 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಆದೂರು ದೊಡ್ಡ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 2.62 |
| 10 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಕಾಡಜಕ್ಕನಹಳ್ಳಿ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 1.57 |
| 11 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಬೊಮ್ಮಂಡನಹಳ್ಳಿ ಕೆರೆ | ಸಣ್ಣ ನೀರಾವರಿ ಇಲಾಖೆಯ ಕೆರೆ | 19.67 |
| 12 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಹುಲಿಮಂಗಲ ಕೆರೆ | ಸಣ್ಣ ನೀರಾವರಿ ಇಲಾಖೆಯ ಕೆರೆ | 14.30 |
| 13 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಜಿಗಣಿ ದೊಡ್ಡ ಕೆರೆ | ಸಣ್ಣ ನೀರಾವರಿ ಇಲಾಖೆಯ ಕೆರೆ | 76.68 |
| 14 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಎಸ್.ಬಿಂಗಿಪುರ ಚಿಕ್ಕ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 1.20 |
| 15 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಸಕಲವಾರ ಭುಜಂಗದಾಸನ ಕೆರೆ | ಸಣ್ಣ ನೀರಾವರಿ ಇಲಾಖೆಯ ಕೆರೆ | 10.75 |
| 16 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ಎಸ್.ಬಿಂಗಿಪುರ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 4.97 |
| 17 | ಬೆಂಗಳೂರು ನಗರ | ಆನೇಕಲ್ | ಜಿಗಣಿ | ವಿಠಸಂದ್ರ ಕೆರೆ | ಜಿಲ್ಲಾ ಪಂಚಾಯಿತಿ ಕೆರೆ | 4.97 |
| | | | | | ಒಟ್ಟು | **201.24** |